ನ ಹಿ ಧರ್ಮಾದಪರಃಕಶ್ಚಿನ ಪರಮಹಿತಕಾರೀ । ತಥೈವೋಕ್ತಂ-

ಧರ್ಮಃ ಸರ್ವಸುಖಾಕರೋ ಹಿತಕರೋ ಧರ್ಮಂ ಬುಧಾಶ್ಚಿನ್ವತೇ ।
ಧರ್ಮೇಣೈವ ಸಮಾಪ್ಯತೇ ಶಿವಸುಖಂ ಧರ್ಮಾಯ ತಸ್ಮೈ ನಮಃ ।
ಧರ್ಮಾನ್ನಾಸ್ತ್ಯಪರಃ ಸುಹೃದ್ಭವಭೃತಾಂ ಧರ್ಮಸ್ಯ ಮೂಲಂ ದಯಾ ।
ಧರ್ಮೇ ಚಿತ್ತಮಹಂ ದಧೇ ಪ್ರತಿದಿನಂ ಹೇ ಧರ್ಮ ಮಾಂ ಪಾಲಯ ॥
ರಾಜ್ಯಂ ಚ ಸಂಪದೋ ಭೋಗಾಃ ಕುಲೇ ಜನ್ಮ ಸುರೂಪತಾ ।
ಪಾಂಡಿತ್ಯಮಾಯುರಾರೋಗ್ಯಂ ಧರ್ಮಸ್ಯೈತತ್ಫಲಂ ವಿದುಃ ॥
ನಾಂಕುರಃ ಸ್ಯಾದ್ವಿನಾ ಬೀಜಾದ್ವಿನಾ ವೃಷ್ಟಿರ್ನ ವಾರಿದಾತ್ ।
ಛತ್ರಾದ್ವಿನಾಪಿ ನ ಛಾಯಾ ವಿನಾ ಧರ್ಮಾನ್ನ ಸಂಪದಃ ॥
ಅತ ಏವ ಹಿ ಚತುರ್ವಿಧಪುರುಷಾರ್ಥೇಷು ಧರ್ಮ ಆದೌ ಪಠ್ಯತೇ ।
ಅರ್ಥಕಾಮಯೋರ್ಧರ್ಮಮೂಲತ್ವಾತ್, ಮೋಕ್ಷಸ್ಯಚ ತನ್ಮೂಲತ್ವಾತ್ ॥
ತದುಕ್ತಂ-ಧರ್ಮಾದೇವಾರ್ಥಸಂಸಿದ್ಧಿಸ್ತತಃ ಕಾಮಸುಖೋದಯಃ ।
ಸ ಚ ಸಂಪ್ರೀತಯೇ ಪುಂಸಾ ಧರ್ಮಾತ್ಸೈಷಾ ಪರಂಪರಾ ॥
ತಸ್ಮಾದಿಮಾಂ ಚಲಾಂ ಲಕ್ಷ್ಮೀಂ ಶಾಶ್ವತೀಂ ಕರ್ತುಮಿಚ್ಛತಾ ।
ತಯಾ ಧರ್ಮೋಽನುಮಂತವ್ಯಃ ಸೋಽನುಷ್ಠೇಯಶ್ಚ ಶಕ್ತಿತಃ ॥

ಕೋ ನಾಮಾಯಂ ಧರ್ಮ ಇತಿಚೇತ್ತತ್ರ ಸತ್ಯಾಪಯಾಮಃ – ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ, ಸಂಸಾರಸ್ಥಾನ್ ಪ್ರಾಣಿನೋ ನಾಕೇಂದ್ರ ನರೇಂದ್ರ ಮುನೀಂದ್ರ ಮುಕ್ತಿಸ್ಥಾನೇ ಧರತಿ ಧಾರಯತ ಇತಿ ವಾ ಧರ್ಮಃ ಇತಿ ವ್ಯುತ್ಪತ್ತೇಃ ।

ತತ್ರ ಪಟ್ಟಬದ್ಧ ಮುಕುಟಬದ್ಧಾರ್ಧ ಚಕ್ರವರ್ತಿ ಸಕಲ ಚಕ್ರವರ್ತಿ ದೇವೇಂದ್ರಾದಿ ಪದಮಭ್ಯುದಯ । ನಿಃಶ್ರೇಯಸಂತಾವತ್ :-

ಜನ್ಮಜರಾಮಯಮರಣೈಃ ಶೋಕೈರ್ದುಃಖೈರ್ಭಯೈಶ್ಚ ಪರಿಮುಕ್ತಂ ।
ನಿರ್ವಾಣಂಶುದ್ಧಸುಖಂ ನಿಃಶ್ರೇಯಸಮಿಷ್ಯತೇ ನಿತ್ಯಂ ॥
ಏತಾದೃಶ ಧರ್ಮವೃದ್ಧಿರಸ್ತ್ವಿತ್ಯಾಶೀರ್ವಾದಃ ॥

—



## ಶ್ರುತಾವತಾರಕಥೆ

—

ಯಥಾರ್ಥವಸ್ತುಸ್ವರೂಪಪ್ರತಿಪಾದಕವಾದ ಜೈನಶಾಸ್ತ್ರವು ಅನಾದಿ ಪರಂಪರೆಯಿಂದ ಬಂದಿರುವುದರಿಂದಲೂ ಬ್ರಹ್ಮಲೋಕದಲ್ಲಿ ಅವಿಚ್ಛಿನ್ನವಾಗಿರುವುದರಿಂದಲೂ ಅಪೌರುಷೇಯವಾಗಿದ್ದರೂ, ಕಾಲವಿಶೇಷದಲ್ಲಿ ತೀರ್ಥಂಕರರು ಪ್ರಕಾಶಪಡಿಸುವುದರಿಂದ ಪೌರುಷೇಯವೂ ಆಗಿದೆ. ಈ ಭರತಕ್ಷೇತ್ರದಲ್ಲಿ ಉತ್ಸರ್ಪಿಣಿಯೆಂದೂ ಅವಸರ್ಪಿಣಿಯೆಂದೂ ಕಾಲವು ಎರಡುವಿಧವಾಗಿ ಪ್ರವರ್ತಿಸುತ್ತದೆ. ಪ್ರತಿಯೊಂದು ಕಾಲವು ಹತ್ತು ಕೋಟೀಕೋಟೀ ಸಾಗರೋಪಮವಾಗಿರುವುದು. ಈಗ ನಡೆಯುತ್ತಿರುವುದು ಅವಸರ್ಪಿಣೀಕಾಲವು. ಇದರಲ್ಲಿ ಸುಷಮಸುಷಮ, ಸುಷಮ, ಸುಷಮದುಃಷಮ, ದುಃಷಮಸುಷಮ, ದುಃಷಮ, ದುಃಷಮದುಃಷಮ ವೆಂದು ಆರು ಭೇದಗಳಿವೆ. ಮೊದಲನೆಯ ಸುಷಮಸುಷಮಕಾಲವು ಉತ್ತಮಭೋಗಭೂಮಿಯ ಸ್ಥಿತಿಯಿಂದ ನಾಲ್ಕು ಕೋಟೀಕೋಟೀ ಸಾಗರೋಪಮಪರಿಮಿತವಾಗಿ ನಡೆಯುವುದು. ಎರಡನೆಯ ಸುಷಮ ಕಾಲವು ಮಧ್ಯಮಭೋಗಭೂಮಿಯ ಸ್ಥಿತಿಯಿಂದ ಮೂರು ಕೋಟೀ ಕೋಟೀ ಸಾಗರೋಪಮಪರಿಮಿತವಾಗಿ ನಡೆಯುವುದು. ಮೂರನೆಯ ಸುಷಮದುಃಷಮಕಾಲವು ಜಘನ್ಯಭೋಗಭೂಮಿಯ ಸ್ಥಿತಿಯಿಂದ ಎರಡು ಕೋಟೀಕೋಟೀ ಸಾಗರೋಪಮಪರಿಮಿತವಾಗಿ ನಡೆಯುವುದು. ಈ ಕಾಲದ ಅಂತ್ಯದಲ್ಲಿ ಒಂದು ಪಲ್ಯಕಾಲದ ಎಂಟನೆಯ ಭಾಗದಲ್ಲಿ ಕ್ರಮವಾಗಿ ಪ್ರತಿಶ್ರುತಿ ಮೊದಲಾದ ಹದಿನಾಲ್ಕು ಮಂದಿ ಮನುಗಳು ಹುಟ್ಟಿರುತ್ತಾರೆ. ಅವರಲ್ಲಿ ಕೊನೆಯ ಮನುವಾದ ನಾಭಿರಾಜರಿಗೂ ಮರುದೇವಮ್ಮನವರಿಗೂ ಶ್ರೀಮದ್ದೇವಾಧಿದೇವ ವೃಷಭತೀರ್ಥಂಕರರು ಮತಿಶ್ರುತ ಅವಧಿಗಳೆಂಬ ಮೂರು ಜ್ಞಾನವುಳ್ಳವರಾಗಿ ಜನಿಸಿರುತ್ತಾರೆ. ಅವರು ಬಹುಕಾಲ ರಾಜ್ಯಭಾರವನ್ನು ಮಾಡಿ ಕೊನೆಗೆ ಸಂಸಾರಭೋಗೋಪಭೋಗಗಳಲ್ಲಿ ವೈರಾಗ್ಯವನ್ನು ಹೊಂದಿ ಜಿನದೀಕ್ಷೆಯನ್ನು ಪಡೆದು ಉಗ್ರೋಗ್ರತಪಮಂ ಗೈದು ನಾಲ್ಕುವಿಧವಾದ ಘಾತಿಕರ್ಮಗಳನ್ನು ಕೆಡಿಸಿ ಲೋಕಾಲೋಕಸ್ವರೂಪವನ್ನರಿವ ಕೇವಲಜ್ಞಾನವನ್ನು ಪಡೆದು ಸಮವಸರಣವೆಂಬ ವಿಹಾರಮಂಟಪ ವಿರಾಜಮಾನರಾದರು. ಆ ಮಹಾಸ್ವಾಮಿಯ ಮುಖಕಮಲದಿಂದ ಕಂಠ

ತಾಲ್ವೋಷ್ಠಪುಟವ್ಯಾಪಾರರಹಿತವಾಗಿ ಭವ್ಯಜನರ ಪುಣ್ಯಪ್ರೇರಣೆಯಿಂದ ಅವರವರ ಅಭೀಷ್ಟವಸ್ತುಕಥನರೂಪವಾಗಿ ಸರ್ವಭಾಷಾತ್ಮಕವಾದ ಮೃದುಮಧುರಗಂಭೀರಶ್ರಾವ್ಯಭಾಷೆ—ದಿವ್ಯಧ್ವನಿಯು ನೈಸರ್ಗಿಕವಾಗಿ ಉತ್ಪನ್ನವಾಯಿತು. ಆ ದಿವ್ಯವಾಣಿಯೇ ಜಿನಶಾಸ್ತ್ರವೆಂಬುದು. ಅವಸರ್ಪಿಣೀ ಕಾಲದಲ್ಲಿ ಆಗಲೇ ಶಾಸ್ತ್ರೋತ್ಪತ್ತಿಯು. ಹೀಗೆ ಇಪ್ಪತ್ತನಾಲ್ಕು ತೀರ್ಥಂಕರರಿಂದ ಅವರವರ ಕಾಲದಲ್ಲಿ ದಿವ್ಯಧ್ವನಿರೂಪವಾಗಿ ಶಾಸ್ತ್ರವು ಉತ್ಪನ್ನವಾಗುತ್ತಿದ್ದಿತು. ಕೊನೆಯ ತೀರ್ಥಂಕರರಾದ ವರ್ಧಮಾನಸ್ವಾಮಿಯು ಮೂವತ್ತು ವರ್ಷಕಾಲ ಸಮವಸರಣದಲ್ಲಿ ವಿಹರಿಸುತ್ತ ಭವ್ಯಪ್ರಾಣಿಗಳೆಂಬ ಸಸ್ಯಗಳಿಗೆ ಧರ್ಮವರ್ಷವನ್ನು ಸುರಿದು ಕೊನೆಗೆ ಸಮವಸರಣವನ್ನು ಬಿಟ್ಟು ಪಾವಾಪುರದಲ್ಲಿ ನಾಲ್ಕು ಅಘಾತಿಕರ್ಮಗಳನ್ನು ಕೆಡಿಸಿ ಮೋಕ್ಷವನ್ನು ಪಡೆದರು.

ತರುವಾಯ ಅವರ ಗಣಧರರಾದ ಇಂದ್ರಭೂತಿಕೇವಲಿಗಳು ಅಂಗಪೂರ್ವಶಾಸ್ತ್ರವನ್ನು ಸುಧರ್ಮರಿಗೂ, ಜಂಬೂಸ್ವಾಮಿಗಳಿಗೂ ಉಪದೇಶಮಾಡಿ ಚತುರ್ಥಕಾಲದಲ್ಲಿ ಮೂರುವರುಷವೂ ಎಂಟುವರೆ ತಿಂಗಳು ಉಳಿಯುವಾಗ ಕೇವಲಜ್ಞಾನವನ್ನು ಪಡೆದು ಮೋಕ್ಷಂಗತರಾದರು. ಅನಂತರ ಸುಧರ್ಮರಿಗೂ ಜಂಬೂಸ್ವಾಮಿಗಳಿಗೂ ಕೇವಲಜ್ಞಾನೋತ್ಪತ್ತಿಯಾಗಿ ಅವರೂ ಮೋಕ್ಷವನ್ನು ಪಡೆದರು. ಈ ಭರತಕ್ಷೇತ್ರದಲ್ಲಿ ಕೇವಲಜ್ಞಾನವೆಂಬ ಸೂರ್ಯನು ಅವರೊಡನೆಯೇ ಅಸ್ತಂಗತನಾದನು. ಅವರ ನಂತರ ದ್ವಾದಶಾಂಗಪಾಠಿಗಳಾದ ವಿಷ್ಣುಮುನಿ, ನಂದಿ, ಅಪರಾಜಿತ, ಗೋವರ್ಧನ, ಭದ್ರಬಾಹು ಎಂಬೀ ಐದುಮಂದಿಗಳು ಶ್ರುತಕೇವಲಿಗಳಾದರು. ಅವರನಂತರ ಶ್ರುತಕೇವಲತ್ವವೂ ಲೋಪವಾಯಿತು.

ಆ ಮೇಲೆ ವಿಶಾಖದತ್ತ, ಪ್ರೌಷ್ಠಿಲ, ಕ್ಷತ್ರಿಯ, ಜಯಸೇನರೆಂಬ ನಾಲ್ಕು ಮಂದಿಗಳು ಏಕಾದಶಾಂಗದಶಪೂರ್ವಧಾರಿಗಳಾದರು. ತದನಂತರ ನಕ್ಷತ್ರಮಾಲಾ, ಜಯಮಾಲಾ ಮೊದಲಾದ ಐದುಮಂದಿಗಳು ಏಕಾದಶಾಂಗಧಾರಿಗಳಾದರು. ಇವರನಂತರ ಸುಭದ್ರರು ಮೊದಲಾದ ನಾಲ್ಕು ಮಂದಿಗಳು ಏಕಾಂಗಪಾಠಿಗಳಾದರು. ಅಲ್ಲಿಗೆ ವರ್ಧಮಾನಸ್ವಾಮಿಯವರು ಮೋಕ್ಷಂಗತರಾಗಿ ೬೮೩ ವರ್ಷಗಳಾದುವು. ಆ ಮೇಲೆ ಅಷ್ಟಾಂಗನಿಮಿತ್ತಧಾರಿಗಳಾದ



ಅರ್ಹದ್ಬಲ್ಯಾಚಾರ್ಯರು ಉದ್ಭವಿಸಿದರು. ಅವರು ಕಲಿಕಾಲದೋಷದಿಂದ ತಮ್ಮ ಶಿಷ್ಯರಲ್ಲಿ ಉಂಟಾದ ಭೇದಬುದ್ಧಿಯನ್ನು ನೋಡಿ ಗಣಗಚ್ಛಾದಿಗಳನ್ನೇರ್ಪಡಿಸಿದರು. ಅವರ ಕಾಲಾನಂತರ ಧರಸೇನಾಚಾರ್ಯರೆಂಬ ಮಹಾಶಾಸ್ತ್ರಜ್ಞಾನಿಗಳು ಉತ್ಪನ್ನರಾಗಿ ಉರ್ಜಯಂತಗಿರಿಯ ಚಂದ್ರಗುಹೆಯಲ್ಲಿ ವಾಸಮಾಡಿಕೊಂಡಿದ್ದರು. ಆ ಮಹಾತ್ಮರು ತಮ್ಮಲ್ಲಿರುವ ಶಾಸ್ತ್ರವನ್ನು ಯಾರಿಗಾದರೂ ಉಪದೇಶ ಮಾಡದಿದ್ದರೆ ತಮ್ಮೊಡನೆಯೇ ಅದು ಲೋಪವಾಗುವುದೆಂದು ಜ್ಞಾನದೃಷ್ಟಿಯಿಂದ ನೋಡಿ ದೇಶೇಂದ್ರವೆಂಬ ದೇಶದ ವೇಣಾ ತಟಾಕದಲ್ಲಿದ್ದ ಮುನಿಸಂಘಕ್ಕೆ ತಮ್ಮ ಅವಸಾನ ಮೊದಲಾದ ವಿಷಯವನ್ನು ಸೂಚಿಸಿ ಚತುರರಾದ ಇಬ್ಬರು ಶಿಷ್ಯರನ್ನು ಕಳುಹಿಸಿಕೊಡುವಂತೆ ಸಂಘಾಧಿಪತಿಗಳಿಗೆ ಬರೆದು ಕಳುಹಿಸಿದರು. ಅದರಂತೆ ವೇಣಾತಟಾಕದಿಂದ ಇಬ್ಬರು ಶಿಷ್ಯರು ಕಳುಹಿಸಲ್ಪಟ್ಟರು. ಧರಸೇನಾಚಾರ್ಯರು ಶಿಷ್ಯರ ಬದ್ಧಿಕುಶಲತೆಯನ್ನು ಪರೀಕ್ಷಿಸುವುದಕ್ಕಾಗಿ ಅವರುಗಳಿಗೆ ಎರಡು ದೇವತಾಸಿದ್ಧಿಮಂತ್ರಗಳನ್ನು ಉಪದೇಶ ಮಾಡಿ ದೇವತೆಯನ್ನು ಸಾಧಿಸಿಕೊಂಡು ಬರುವಂತೆ ಆಜ್ಞಾಪಿಸಿದರು. ಅದರಂತೆ ಇಬ್ಬರೂ ಸಾಧಿಸುವುದಕ್ಕೆ ಉಪಕ್ರಮಿಸಲು ಒಂದು ಮಂತ್ರದಲ್ಲಿ ಒಂದು ಅಕ್ಷರವು ಕಡಮೆಯಿದ್ದುದರಿಂದ ಆ ಮಂತ್ರಾಧೀನವಾದ ದೇವತೆಯು ನ್ಯೂನಾವಯವವುಳ್ಳದಾಗಿಯೂ, ಇನ್ನೊಂದು ಮಂತ್ರದಲ್ಲಿ ಒಂದು ಅಕ್ಷರವು ಅಧಿಕವಿದ್ದುದರಿಂದ ಆ ಮಂತ್ರಾಧೀನವಾದ ದೇವತೆಯು ಅಧಿಕಾವಯವವುಳ್ಳದಾಗಿಯೂ ಪ್ರತ್ಯಕ್ಷವಾದುವು. ಆ ಚತುರಶಿಷ್ಯರು ದೇವತೆಗಳ ಅವಯವವಿಕಾರವು ಅವರ ನಿಜವಾದಸ್ವರೂಪವಲ್ಲವೆಂದು ತಿಳಿದು ಆ ಮಂತ್ರಗಳನ್ನು ಪರಿಶೋಧಿಸುವಲ್ಲಿ ಅವುಗಳಲ್ಲಿ ನ್ಯೂನಾಧಿಕಾಕ್ಷರಗಳಿದ್ದುವು. ಆಗ ಆ ಮಂತ್ರಗಳನ್ನು ವ್ಯಾಕರಣರೀತಿಗನುಸಾರವಾಗಿ ಪರಿಷ್ಕರಿಸಿ ಪುನಃ ಸಾಧಿಸಲು ಆ ದೇವತೆಗಳು ನಿಜರೂಪಧಾರಿಗಳಾಗಿ ಪ್ರತ್ಯಕ್ಷವಾಗಿ ತಮ್ಮಿಂದ ಯಾವ ಸೇವೆಯಾಗಬೇಕೆಂದು ಕೇಳಿಕೊಂಡರು. ನಿಸ್ಪೃಹರಾದ ಆ ಶಿಷ್ಯರಿಬ್ಬರೂ "ನಾವು ನಮ್ಮ ಗುರುಗಳ ಆಜ್ಞೆಯ ಪ್ರಕಾರ ಮಂತ್ರಗಳನ್ನು ಸಾಧಿಸಿದೆವಲ್ಲದೆ ನಿಮ್ಮಿಂದ ನಮಗೆ ಯಾವ ಪ್ರಯೋಜನವೂ ಆಗಬೇಕಾದುದಿಲ್ಲ" ವೆಂದು ಹೇಳಿ ತಮ್ಮ ಗುರುಗಳ ಸಮೀಪಕ್ಕೆ ಹೋಗಿ ನಡೆದ ವೃತ್ತಾಂತವನ್ನು ವಿಜ್ಞಾಪಿಸಿಕೊಂಡರು.

ಧರಸೇನಾಚಾರ್ಯರು ಸಂತುಷ್ಟರಾಗಿ ಅವರಿಗೆ ಪಾಠವನ್ನು ಹೇಳಲಾರಂಭಿಸಿದರು. ಆ ಚತುರರಿಬ್ಬರೂ ಶೀಘ್ರವಾಗಿ ಗುರುಗಳಿಂದ ಪೂರ್ಣವಿದ್ಯಾಲಾಭವನ್ನು ಹೊಂದಿದರು. ದೇವತೆಗಳು ಸಂತುಷ್ಟರಾಗಿ ಅವರಿಬ್ಬರನ್ನೂ ಪೂಜಿಸಿ ಮೊದಲನೆಯವರ ವಿಷಯವಾಗಿದ್ದ ದಂತಪಙ್ಕ್ತಿಯನ್ನು ಸರಿಮಾಡಿ ಅವರಿಗೆ ಪುಷ್ಪದಂತರೆಂದೂ ಎರಡನೆಯವರಿಗೆ ಭೂತಬಲಿಗಳೆಂದೂ ಹೆಸರಿಟ್ಟರು. ಅನಂತರ ಧರಸೇನಾಚಾರ್ಯರು ತಮ್ಮ ಅವಸಾನವು ಸಮೀಪಿಸಿತೆಂದು ತಿಳಿದು ಮರಣಕಾಲದಲ್ಲಿ ಶಿಷ್ಯರು ಸಮೀಪದಲ್ಲಿದ್ದರೆ ವ್ಯಸನಪಡುವರೆಂದು ಗ್ರಾಮಾಂತರಕ್ಕೆ ಹೋಗುವಂತೆ ಆಜ್ಞಾಪಿಸಿದರು. ಗುರುಗಳ ಆಜ್ಞಾನುಸಾರವಾಗಿ ಇಬ್ಬರೂ ಬೇರೆ ಬೇರೆ ಗ್ರಾಮಕ್ಕೆ ಹೊರಟುಹೋದರು. ಧರಸೇನಾಚಾರ್ಯರು ವಿಧಿವಶರಾದರು. ಬಳಿಕ ಪುಷ್ಪದಂತಾಚಾರ್ಯರು ಜಿನಪಾಲಿತನೆಂಬವನಿಗೆ ದೀಕ್ಷೆಯನ್ನು ಕೊಟ್ಟು ಪಾಠವನ್ನು ಹೇಳುತ್ತಿದ್ದರು. ಒಂದಾನೊಂದು ದಿವಸ ಅವರು ಅಷ್ಟಪ್ರಾಭೃತವೆಂಬ ಶಾಸ್ತ್ರವನ್ನು ಲಿಪಿಬದ್ಧವಾಗಿ ರಚಿಸಬೇಕೆಂದು ಯೋಚಿಸಿ ಆ ವಿಷಯದಲ್ಲಿ ಭೂತಬಲ್ಯಾಚಾರ್ಯರ ಅಭಿಪ್ರಾಯವೇನಿರುವುದೆಂದು ತಿಳಿಯುವುದಕ್ಕಾಗಿ ಪ್ರರೂಪಣೆಯೆಂಬ ಗ್ರಂಥವನ್ನು ನೂರು ಗಾಥೆಗಳಿಂದ ರಚಿಸಿ ಜಿನಪಾಲಿತನಿಗೆ ಅಭ್ಯಾಸಮಾಡಿಸಿ ಭೂತಬಲ್ಯಾಚಾರ್ಯರ ಸಮೀಪಕ್ಕೆ ಕಳುಹಿಸಿದರು. ಜಿನಪಾಲಿತನು ಹೋಗಿ ಗ್ರಂಥವನ್ನು ಅವರ ಮುಂದೆ ಹೇಳಿದನು. ಭೂತಬಲ್ಯಾಚಾರ್ಯರು ಪುಷ್ಪದಂತರ ಅಭಿಪ್ರಾಯವನ್ನು ತಿಳಿದು ಜೀವಸ್ಥಾನ, ಕ್ಷುಲ್ಲಕಬಂಧ, ಬಂಧಸ್ವಾಮಿತ್ವ, ಭಾವವೇದನಾ, ವರ್ಗಣಾಗಳೆಂಬ ಐದು ಭಾಗಗಳುಳ್ಳ ಮೂವತ್ತು ಸಹಸ್ರಪರಿಮಿತವಾದ ಮಹಾಬಂಧವೆಂಬ ಗ್ರಂಥವನ್ನು ರಚಿಸಿದರು. ಇನ್ನೂ ಕೆಲವು ಗ್ರಂಥಗಳನ್ನು ಲಿಪಿಬದ್ಧವಾಗಿ ರಚಿಸಿ ಜ್ಯೇಷ್ಠ ಶುದ್ಧ ೫ ದಿವಸ ಚತುಃಸಂಘವನ್ನು ಸೇರಿಸಿ ಲಿಪಿಬದ್ಧವಾಗಿ ರಚಿಸಿದ ಶಾಸ್ತ್ರವನ್ನೆಲ್ಲ ಅಲಂಕರಿಸಿ ಪೂಜಿಸಿ ಆ ಗ್ರಂಥಗಳನ್ನು ಪುಷ್ಪದಂತಾಚಾರ್ಯರ ಬಳಿಗೆ ಕಳುಹಿಸಿದರು. ಅವರು ಅತ್ಯಂತ ಸಂತುಷ್ಟರಾಗಿ ಅದೇ ಪ್ರಕಾರ ಶಾಸ್ತ್ರವನ್ನು ಪೂಜಿಸಿದರು. ಅಂದಿನಿಂದ ಜೈನರಿಗೆ ಜ್ಯೇಷ್ಠಶುದ್ಧ ಪಂಚಮಿಯು ಶ್ರುತಪಂಚಮಿಯೆಂಬ ಪರ್ವತಿಥಿಯೆನಿಸಿತು.



ರಾಗ-ಆನಂದ ಭೈರವಿ. ಆದಿತಾಳ.

ಮಂಗಲಂ ದ್ವಾದಶಾಂಗರೂಪೇ ದೇವಿ, ಶಾರದೇ ಮಮ ದೇಹಿ ॥ಪ॥

ಆಚಾರಸೂತ್ರಕೃತ-ಪಾದಕಮಲಯುಗೇ । ಸ್ಥಾನಸಮವಾಯಚಾರು
ಊರುಯುಗೇ ॥ಅ-ಪ॥

ವ್ಯಾಖ್ಯಾಪ್ರಜ್ಞಪ್ತಿ-ಜ್ಞಾತೃಕಥಾರೂಪೇ ಶುಚಿಚೇಲಲಸಿತನಿತಂಬೇ ॥
ಉಪಾಸಕವೇದಾಂಗ-ನಾಭಿಸರೋವರೇ,
ಸಾಧುರತ್ನಕಾಂಚಿಕೂಜಿತರಾಜಹಂಸೇ ॥೧॥

ಅಂತಕೃದ್ಧಶವರಾ-ನುತ್ತರೋಪಪಾದಿಕ, ಹಾರಲಸಿತಕುಚಕುಂಭೇ ॥
ಪ್ರಶ್ನವ್ಯಾಕರ-ಣಾಂಗವಿಪಾಕಸೂತ್ರ, ಕರಯುಗಲಾಲಿತಪುಸ್ತಕವೀಣೇ ॥೨॥

ವರದೃಷ್ಟಿವಾದಾಂಗ-ವದನಸರೋರುಹೇ, ಪರಿಕರ್ಮನಾಸಿಕಶೋಭೆ ॥
ಸೂತ್ರಪದಾಯತ-ನಯನವಿಶಾಲೇ, ಪ್ರಥಮಾನುಯೋಗಶ್ರೀ-
ಫಾಲವಿಶೇಷಕೇ ॥೩॥

ಪೂರ್ವಚತುರ್ದಶ-ಪೂತಾಕೃತಿಯುತೇ, ಚೂಳಿತರತ್ನಕಿರೀಟೇ ॥
ಪ್ರಕೀರ್ಣಕಾಂಗಬಾಹ್ಯ-ಕುಸುಮಸುಮಾಲೇ,
ಪಂಡಿತಗುರುವರಮಾನಸರಾಜಹಂಸೇ ॥ಮಂಗಲಂ॥ ॥೪॥

ರಾಗ-ಆನಂದಭೈರವಿ. ರೂಪಕತಾಳ.

ವಾಣಿ ವರಕಲ್ಯಾಣಿ ಮಂಗಲಂ, ಏಣನಯನೆ ಜಾಣೆ ಜಯಕೃಪಾಣಿ
ಮಂಗಲಂ ॥ಪ॥

ಕ್ಷೋಣಿಗಧಿಕತ್ರಾಣೆ ನಿಃಶ್ರೇಯ-ಶ್ರೇಣಿಮಧುರವಾಣಿ ಪನ್ನಗ-
ವೀಣಾಪಾಣಿಸುರಸುಪಾಣಿ, ರಮಣಿಮಣಿ ಕಟ್ಯಾಣಿವೇಣಿ ॥ಅ-ಪ॥

ಇಂದ್ರಇಂದ್ರ ಇಂದ್ರವಂದಿತೇ, ಕಲ್ಪತರುಜಿನೇಂದ್ರಚಂದ್ರಮುಖಿಸುಬೋಧಿತೇ ॥ ಸಾಂದ್ರಸರಸಸುಖಿವಿಹೃದಯ-ಮಂದಿರೇ ಸುಗಂಧಭರಿತೇ,
ಇಂದಿರಾಕ್ಷಿ ಮಂದ್ರನಿನದೆ, ಬಂಧುರಾಂಗಿ ಪಾಹಿಪಾಹಿ ॥೧॥

ಅರುಣ ಚರಣ ಕಿರಣರಂಜಿತೇ, ಮರಕತಾಭಭರಿತನವ್ಯದಿವ್ಯಭೂಷಿತೇ ॥
ಪರಮಶುಭ್ರ ವಸನಯುಕ್ತೆ, ಸ್ಥಿರಗುಣೌಘಚರಿತೆ ಪೂತೆ ।
ನಿರಘನಿರ್ಮಲನಿತ್ಯತೃಪ್ತೆ, ಶರಣು ಶರಣು ಪಾಹಿ ಪಾಹಿ ॥೨॥

ಧರೆಯೊಳಧಿಕಬೆಳ್ಗುಳಾದ್ರಿಯು, ಬಾಹುಬಲಿಯ ಚರಣಭಕ್ತ ಚಾರುಕೀರ್ತಿಯು॥
ವರದಛತ್ರನಿಲಯದಲ್ಲಿ, ಸ್ಥಿರದಿ ನೆಲಸಿ ಮೆರೆವ ಗುರುವೆ,
ತರಳಬ್ರಹ್ಮನನ್ನು ಸುಖದೊಳಿರಿಸು ವಾಣಿ ಪಾಹಿ ಪಾಹಿ ॥೩॥

ರಾಗ-ಧೀರಶಂಕರಾಭರಣ. ರೂಪಕತಾಳ.

ಶ್ರುತವಾಣೀ, ಧೃತವೀಣಾ, ಕೃತಪಾಣೀ, ರಮಣೀ ॥ಪ॥
ವಿತತಾಮರ-ಶತನಾಯಕ-ನತಪಾದಪಯೋಜಾ ॥ಅ-ಪ॥
ಕಮಲಾಯತ, ವಿಮಲಾನನ, ಸುಮಲಾಲಿತಹಸನಾ ॥
ಕರುಣಾರಸ, ವರುಣಾಲಯ ತರುಣಾಂಬುಜ ನಯನಾ ॥೧॥
ಮಧುರಾಜಿಸು, ಮಧುರಾಧರ, ಮಧುರಾಕೃತಿಶೋಭಾ ॥
ಮದನಾಗಮ, ಸದನಾಯಕ ಪಿಕನಾಯಕವಚನಾ ॥೨॥
ಲಲನಾಜನ, ಕಲನಾದನ, ಕಲನಾಹೃದಿ ಜಯತಿ ।
ನರಮಂಡಲ, ವರಪಂಡಿತ, ಗುರುಪಂಡಿತ ಚರಣಾ ॥೩॥

ರಾಗ-ಶಂಕರಾಭರಣ. ಆದಿತಾಳ.

ಅಂಬಿಕೆಯೆ ನಂಬಿಕೆಯಿಂ ನಾಂ, ವಂದಿಪೆನು ॥ಪ॥
ವಾಣಿವರ ಕಲ್ಯಾಣಿಯೆ ವೇಣೀ ಗುಣಾಭರಣೆಯೆ ॥
ಜಾಣೆ ನಿನ್ನ ತ್ರಾಣವನ್ನು, ಕಾಣದೆ ನಾ ನೊಂದೆ ದೀನ ॥೧॥
ಭಾರತಿಯೆ ನೀ ರತಿಯೆ, ನಂಬಿದರ ಸಾರಥಿಯೇ ॥
ಚಾರು ನಿನ್ನ ಪದವನ್ನು, ವಂದಿಪೆನು ನಾನು ಮುನ್ನ ॥೨॥
ಮಂದಯಾನೆ ನಿನ್ನ ಪದ, ದ್ವಂದ್ವಂಗಳೆ ವಂದಿಸುವೆ ॥
ಇಂದುಮುಖಿ ಚಂದದಿಂದ, ಕಂದನ ಸಲಹು ಅಂಬ ॥೩॥

ರಾಗ-ಕಾಂಭೋಜಿ. ಆದಿತಾಳ.

ಪರಿಪಾಲಿಸೌ ವಾಣಿ, ಶರಣರ ಪೋಷಿಣಿ ॥ಪ॥
ವರವೇದಗಾಮಿನಿ, ಪರಿಪೂತರೂಪಿಣಿ ॥ಅ-ಪ॥
ದ್ವಾದಶಾಂಗವಾದಿನಿ, ವೇದತತ್ತ್ವಬೋಧಿನಿ ।
ಸದಮಲಭಕ್ತಿಯಿಂ, ವಂದಿಪೆ ನಿನ್ನನು ॥೧॥



ವಾಣಿ ವೀಣಾಪಾಣಿ, ಮಣಿ ಮಾಲಾಧಾರಿಣಿ ।
ಕಾಣದ ವಿದ್ಯೆಯೊಳ್, ಜಾಣತ್ವ ತೋರಿಸು ॥೨॥
ಮೆರೆಯುವ ಬೆಳ್ಗುಳ, ಪುರದೊಳು ನೆಲಸಿಹೆ ।
ಪರಮಭವ್ಯರನ್ನು, ನಿರತವು ಕರುಣಿಸು ॥೩॥

ರಾಗ-ಖರಹರಪ್ರಿಯ. ರೂಪಕತಾಳ.

ವಾಣಿಯೆ ಪಾಲಿಸು, ಜಾಣತ್ವ ತೋರಿಸು ॥ಪ॥
ಏಣಾಕ್ಷಿ ಈಕ್ಷಿಸು, ತ್ರಾಣಿಯೆ ರಕ್ಷಿಸು ॥ಅ-ಪ॥
ಮಯೂರವಾಹನೆ, ಕೇಯೂರಭೂಷಣೆ ।
ಕಯ್ಯೊಳಾಂತಿಹೆ ವೀಣೆ, ಕಾಯೆನ್ನ ಬೇಗನೆ ॥೧॥
ನೀರಜಲೋಚನೆ ಚಾರುಶ್ವೇತಾನನೆ ।
ಕಾರುಣ್ಯಮೂರುತಿ, ಸೇರಿದೆ ನಿನ್ನನೆ ॥೨॥
ಧರೆಯೊಳು ಬೆಳ್ಗುಳ, ಪುರದಧಿವಾಸೆಯೆ ।
ನಿರತದೊಳೆನ್ನನು, ಕರುಣಿಸು ಮಾತೆಯೆ ॥೩॥

ರಾಗ-ಕಾನಡ. ಆದಿತಾಳ.

ದೇವೀ ಶಾರದೇ ದೇವರಾಜನುತೇ ॥ಪ॥
ಭಾವಶುದ್ಧಿಯಿಂದ ಭಾವಿಸುವೆ ಮಾತೆ ॥ಅ-ಪ॥
ಆದಿಬ್ರಹ್ಮಸಿಂಧು-ಗಾಧಘೋಷರೂಪೇ ।
ನಾದ ಬ್ರಹ್ಮರೂಪೇ ದ್ವಾದಶಾಂಗಲಾಪೇ ॥೧॥
ಮೌನಿವೃಂದಮನ-ಸರಸಿಜನ್ಮಪೂತೇ ।
ದೀನನಾಗಿ ನಿನ್ನ, ಧ್ಯಾನಿಸುವೆ ಮಾತೆ ॥೨॥
ಘೋರಪಾಪವೆಂಬ ವಾರಿಧಿಯನೀಗ ।
ಪಾರುಮಾಡಿ ಕಾಯೆ ಬೀರಿ ಕರುಣವನ್ನು ॥೩॥
ನಿನ್ನ ಭಾವಿಸುವ ಪಿನ್ನ ಮಾನವರು ।
ಉನ್ನತಿಯನೈದಿ ಧನ್ಯರಾಗುವರು ॥ ದೇವೀ ಶಾರದೇ ॥ ॥೪॥

ರಾಗ-ಕಾಂಭೋಜಿ. ಆದಿತಾಳ.

ಶಾರದಾಂಬ ವರದೇ ನಾನೊಂದಿಪೆ ನಿನ್ನನು ॥ಪ॥

ಖ್ಯಾತೇ ವೀತರಾಗಮುಖಜಾತೇ, ಭೂತದಯಾಗುಣಯುಕ್ತೇ,
ಜಾತರೂಪಹೃತ್ಪ್ರೀತೇ । ಶಾತಕುಂಭನಿಭಗಾತ್ರೆ, ಮುಕ್ತಿಯನು
ದಾತೆಪ್ರೀತಿಯಲಿ ಮಾತೆ ರಕ್ಷಿಸುವ ॥೧॥

ಧೀರೇ ಕ್ರೂರಕರ್ಮಜಯಶೂರೇ, ವರವೀಣಾಪುಸ್ತಕಧಾರಿಣಿ,
ಸಾರಂಗನೇತ್ರೆ ಭವದೂರೇ । ಸಾರಸಾಂಘ್ರಿಗಳ ತೋರೆ
ಕರುಣವನು ಬೀರೆ ಶರಣರನುದಾರೆ ಪಾಲಿಸುವ ॥೨॥

ವೀರೇ ಚಾರುತತ್ತ್ವ ಸುವಿಚಾರೇ, ಈರಾರುವೇದಸಾರೇ,
ವಾರಾಶಿಗುಣ ಗಭೀರೇ । ಧಾರಿಣಿಯೊಳು ಮೈಸೂರಪುರೀಶ್ವರಿ,
ಭೂರಿಭಕ್ತರನು, ಕರುಣಿಸು ಶಂಕರಿ ॥೩॥

ರಾಗ-ಜುಂಜೋಟಿ. ಆದಿತಾಳ.

ಶಾರದೇ, ಪಾಹಿ ಮಾಂ, ಸರಸಿಜಲೋಚನೆ ॥ಪ॥
ಶ್ರೀಜಿನಮುಖಸರೋಜದೊಳುದಿಸಿದ ॥ಅ-ಪ॥

ಕರುಣಿಸು, ವರವನು, ಪರಿಪರಿ ಬೇಡುವೆ ॥
ಧರೆಯೊಳು, ನರರಿಗೆ ವರಮತಿಗಳನಿತ್ತ ॥೧॥
ವಂದಿಪೇ, ನಿನ್ನನು, ಇಂದು ಮುಖಿಯೆ ನಾ- ॥
ನೊಂದನು, ಅರಿಯೆನು, ಇಂದು ನೀ ಪಾಲಿಸು ॥೨॥
ಆಗಮತತ್ತ್ವದ, ಸಾರವ ಬೋಧಿಸಿ ॥
ಆದಿಜಿನರ, ವದನೋದ್ಭವೆ ವಾಗ್ದೇವಿ ॥೩॥

ರಾಗ-ನಾಟಕುರುಂಜಿ. ರೂಪಕತಾಳ.

(ಪರಾಕೇಲ ಸರಸ್ವತಿ ಎಂಬಂತೆ)

ಸದಾ ಪಾಹಿ ಸರಸ್ವತಿ । ಯತೀಶಮಾನಸರೂಪಿಣಿ ॥ಪ॥
ಮಹಾರವೇ । ಅಂಬ । ದಯಾಮಹಿತೆ ಸ್ಮರಾಮ್ಯಹಂ । ಸರೋಜಮುಖಿ॥
ಸಾಸನಿ । ಧನೀಧ । ಮಗಸಾ । ನಿಧಾನಿಸಾ । ಗಮಧನಿ ॥



ಸಾಸನಿ । ಧಾಧನಿ । ಮಾಮಗ । ಸಾಸನಿ । ಧಾಧನಿ । ಸಾಮಗಮಾ ॥
ಧನಿಸನಿ । ಧಮಗಮ । ಧನಿಸರಿಸನಿ । ಸನಿಧನಿ । ಧಮಧನಿ ॥
॥ ಸದಾ ಪಾಹಿ ಸರಸ್ವತಿ ॥ ॥೧॥

ಪರಬ್ರಹ್ಮ ಮುಖಸಂಜನಿತೆ । ಮಹಾಮಹಿಮಪದೇ । ಜನನಿ ॥
ಕೃಪಾಯುತೇ । ಸುರಾನಮಿತೆ । ಪರಾತ್ಪರೇ । ದಯಾಕರೇ ॥
ಸಾಸನಿ । ಧನೀಧ । ಮಗಸಾ । ನಿಧನಿಸಾ । ಗಮಧನಿ ॥
ಸಾಸನಿ । ಧಾಧನಿ । ಮಾಮಗ । ಸಾಸನಿ । ಧಾಧನಿ । ಸಾ । ಮಗಮಾ ॥
ಧನಿಸನಿ । ಧಮಗಮ । ಧನಿಸರಿಸನಿ । ಸನಿಧನಿ । ಧಮಧನಿ ॥
॥ ಸದಾ ಪಾಹಿ ಸರಸ್ವತಿ ॥ ॥೨॥

ವಿರಿಂಚಿಜೇ । ಮುದಕಾರಿಣಿ । ಸುರಸನ್ನುತಗುಣಪೂತೇ ॥
ಬೆಳುಗುಳ ಪುರವಾಸಿನಿ । ಹಂಸವಾಹಿನಿ । ಸರಸಿಜಾಭೇ ॥
ಸಾಸನಿ । ಧನೀಧ । ಮಗಸಾ । ನಿಧನಿಸಾ ಗಮಧನಿ ॥
ಸಾಸನಿ । ಧಾಧನೀ । ಮಾಮಗ । ಸಾಸನಿ । ಧಾಧನಿ । ಸಾ । ಮಗಮಾ ॥
ಧನಿಸನಿಧಮಗಮ । ಧನಿಸರಿಸನಿ । ಸನಿಧನಿ । ಧಮಧನಿ ॥
॥ ಸದಾ ಪಾಹಿ ಸರಸ್ವತಿ ॥ ॥೩॥

ರಾಗ-ಮೋಹನ. ಆದಿತಾಳ.

ಶ್ರೀಜಿನಮುಖಸರೋಜದೊಳುದಿಸಿದ, ರಾಜೀವಮುಖಿಯೇ ಬಾ ।
ರಾಜಾರುಣನಿಭತೇಜೋಯುತೆ ಸುರ-ಭೂಜಲತಾಂಗಿಯೆ ಬಾ ॥
ವ್ಯಾಜರಹಿತವಿಭ್ರಾಜಿತಾಕ್ಷಯಮಾರ್ಗ, ಬೀಜದ ತಿರುಳೆಯೆ ಬಾ ।
ತ್ರಿಜಗದಖಿಳೇಂದ್ರಪೂಜಿತನೂತ್ನಪ-ಯೋಜಾಂಘ್ರಿಯುಗಳೆಯೆ ಬಾ
ವಾಗ್ದೇವಿ, ರಾಜಿಸುವ ಹಸೆಗೆ ಕರೆದರು ॥ ಶೋಭನ ॥ ॥೧॥

ವಾಣಿ ಕಾಳೋರಗವೇಣೀ ತ್ರಿಭುವನ, ಕಾಣಿಪ ಕನ್ನಡಿ ಬಾ ।
ಏಣಾಂಕಮುಖಿ ಪಂಚಬಾಣನ ಮತ್ತಕ-ರೇಣುಗಮನನಿಭೆ ಬಾ ।
ವೀಣಾಪುಸ್ತಕಪಾಣಿಪರಮಕ-ಲ್ಯಾಣಿಮಂಗಳ ರೂಪೆ ಬಾ ।
ಕ್ಷೋಣಿರತ್ನಾಧಾರೆ, ಶ್ರೇಣಿಯೊಳ್ ಮಾನವ-ಶ್ರೇಣಿಯಾನಂದೆಯೆ ಬಾ
ವಾಗ್ದೇವಿ, ಮಾಣಿಕದ ಹಸೆಗೆ ಕರೆದರು ॥೨॥

ಭಾರತಿಬುಧಜನಸಾರಥಿಮುನಿಜನ, ವಾರಿಜರವಿಬಿಂಬೆ ಬಾ ।
ಶಾರದೆ ಸನ್ನುತ ತ್ರೈರತ್ನಾಬ್ಜಕಾ-ಸಾರದ ಹಂಸೆಯೆ ಬಾ ॥
ಪಾರಾವಾರಗಂಭೀರೆ ಸಕಲ ದೋ-ಷಾರಣ್ಯಪರಶುವೆ ಬಾ ।
ಮಾರಹರನ ಕೀರ್ತಿ-ಕ್ಷೀರಸಾಗರಪೂರ್ಣ ಕೈರವಪ್ರಿಯ ಬಿಂಬೆ ಬಾ ವಾಗ್ದೇವಿ,
ಚಾರುಮಂಟಪದ ಹಸೆಗೆ ಕರೆದರು ॥೩॥

ನೀಲಕುಂತಳೆ ನವ್ಯಬಾಲೇಂದುನಿಟಿಲೆ ವಿ-ಶಾಲಲೋಚನಯುಗೆ ಬಾ ।
ಸ್ಥೂಲಪಯೋಧರೆ ಶೈಲನಿತಂಬೆ ಶುಂ-ಡಾಲಾಂತಕಮಧ್ಯೆ ಬಾ ॥
ಲೀಲಾ ನಿಧಿ ಸುಪ್ರವಾಳಾಂಘ್ರಿಯುಗಳಾಕ್ಷ-ಮಾಲಾಹಸ್ತೆಯೆ ಬಾ ।
ಕೀಲಿತನವರತ್ನಹೇಮಮಯಾಂಗದೆ, ತ್ರೈಲೋಕ್ಯನಾಯಕಿ ಬಾ ವಾಗ್ದೇವಿ,
ನೀಲದ ಹಸೆಗೆ ಕರೆದರು ॥೪॥

ಪಾತ್ರರಹಿತಮಿಥ್ಯಾಶಾಸ್ತ್ರವಿಪಿನವೀತಿ-ಹೋತ್ರಸನ್ನಿಭಳೆಯೆ ಬಾ ।
ಭೂತ್ರಯನುತಜಿನಶಾಸ್ತ್ರವಿನ್ನವನ-ಚೈತ್ರಸುಮಾಸವೆ ಬಾ ॥
ಧಾತ್ರಿಯೊಳನುಪಮಮಾತೃವೆ ಭವವಾರ್ಧಿ-ಭೈತ್ರೆ ಪವಿತ್ರೆಯೆ ಬಾ ।
ಶ್ರೀತ್ರೈರತ್ನಸುಗಾತ್ರಳೆ ಅಕ್ಷಯ-ಸೂತ್ರದ ಪುತ್ಥಳಿಯೆ ಬಾ ವಾಗ್ದೇವಿ,
ನೇತ್ರಾತಿಶಯಕೆ ಕರೆದರು ॥೫॥

ರೂಢಿಯೊಡೆದ ಹಂಸಾರೂಢೆ ಸಕಲವಿದ್ಯಾ-ಪ್ರೌಢೆ ಸದಾನಂದೆ ಬಾ ।
ಬೇಡಿದ ಭಾಗ್ಯವ ನೀಡುವ ಬಿಡುಗಣ್ಣ, ನಾಡಿನ ತರುವೆ ನೀ ಬಾ ॥
ಕೂಡಿದಖಿಲಸೌಖ್ಯನೀವ ಸಕಲಜನ, ಚೂಡಾಮಣಿಯೆ ನೀ ಬಾ ॥
ನೋಡಿ ದಣಿಯದಂಗ ಆಡಿದಣಿಯದು-ದ್ಗಾಢಸದ್ಗುಣಮಣಿ ಬಾ ವಾಗ್ದೇವಿ,
ವೈಡೂರ್ಯದ ಹಸೆಗೆ ಕರೆದರು ॥೬॥

ಆದಿಮಧ್ಯಾಂತವಿಚ್ಛೇದಸರ್ವಾಗಮ-ಭೇದಪ್ರಕಾಶೆಯೆ ಬಾ ।
ಶೋಧಿತನಾನಾ ಭೇದಭಾಷೆಯಗೂಡಿ, ಓದುವ ದೇವಿಯೆ ಬಾ ॥
ಮೇದಿನಿತ್ರಯಕಾಮೋದವೆಸೆವ ಸು-ಮಾಧುರ್ಯವಚನೆಯೆ ಬಾ ।
ಆದಿಜಿನರ ದಿವ್ಯನಾದಪೀಯೂಷಾಂಭೋಧಿಸಂಭವಲಕ್ಷ್ಮಿಯೆ ಬಾ ವಾಗ್ದೇವಿ,
ಗೋಮೇಧಿಕದ ಹಸೆಗೆ ಕರೆದರು ॥೭॥

---



## ಶ್ರೀ ಸರಸ್ವತೀದೇವೀಸ್ತೋತ್ರಂ

ಚಂದ್ರಾರ್ಕಕೋಟಿಘಟಿತೋಜ್ಜ್ವಲದಿವ್ಯಮೂರ್ತೇ ।
ಶ್ರೀ ಚಂದ್ರಿಕಾಕಲಿತನಿರ್ಮಲಶುಭ್ರವಾಸೇ ॥
ಕಾಮಾರ್ಥದೇ ಚ ಕಲಹಂಸಸಮಾಧಿರೂಢೇ ।
ವಾಗೀಶ್ವರಿ! ಪ್ರತಿದಿನಂ ಮಮ ರಕ್ಷ ದೇವಿ ! ॥೧॥

ದೇವಾ ಸುರೇಂದ್ರನತಮೌಲಿಮಣಿಪ್ರರೋಚಿ ।
ಶ್ರೀಮಂಜರೀನಿಬಿಡರಂಜಿತಪಾದಪದ್ಮೇ ॥
ನೀಲಾಲಕೇ ಪ್ರಮದಹಸ್ತಿಸಮಾನಯಾನೇ ।
ವಾಗೀಶ್ವರಿ ! ಪ್ರತಿದಿನಂ ಮಮ ರಕ್ಷ ದೇವಿ ! ॥೨॥

ಕೇಯೂರಹಾರಮಣಿಕುಂಡಲಮುದ್ರಿಕಾದಿ ।
ಸರ್ವಾಂಗಭೂಷಣನರೇಂದ್ರಮುನೀಂದ್ರವಂದ್ಯೇ ॥
ನಾನಾಸುರತ್ನವರನಿರ್ಮಲಮೌಲಿಯುಕ್ತೇ ।
ವಾಗೀಶ್ವರಿ ! ಪ್ರತಿದಿನಂ ಮಮ ರಕ್ಷ ದೇವಿ ! ॥೩॥

ಪೂಜ್ಯೇ ಪವಿತ್ರಕರಣೋನ್ನತಕಾಮರೂಪೇ ।
ನಿತ್ಯಂ ಫಣೀಂದ್ರಗರುಡಾಧಿಪಕಿನ್ನರೇಂದ್ರೈಃ ॥
ವಿದ್ಯಾಧರೇಂದ್ರಸುರಯಕ್ಷಸಮಸ್ತವೃಂದೈಃ ।
ವಾಗೀಶ್ವರಿ ! ಪ್ರತಿದಿನಂ ಮಮ ರಕ್ಷ ದೇವಿ ! ॥೪॥

ಕಂಕೇಳಿ ಪಲ್ಲವವಿನಿಂದಿತಪಾಣಿಯುಗ್ಮೇ ।
ಪದ್ಮಾಸನೇ ದಿವಸಪದ್ಮಸಮಾನವಕ್ತ್ರೇ ॥
ಜೈನೇಂದ್ರವಕ್ತ್ರಭವದಿವ್ಯಸಮಸ್ತಭಾಷೇ ।
ವಾಗೀಶ್ವರಿ ! ಪ್ರತಿದಿನಂ ಮಮ ರಕ್ಷ ದೇವಿ ! ॥೫॥

ಮಂಜೀರಕೋತ್ಕನಕಕಂಕಣಕಿಂಕಿಣೀನಾಂ ।
ಕಾಂಚ್ಯಾಶ್ಚ ಝಂಕೃತರವೇಣ ವಿರಾಜಮಾನೇ ॥
ಸದ್ಧರ್ಮವಾರಿನಿಧಿಸಂತತವರ್ಧಮಾನೇ ।
ವಾಗೀಶ್ವರಿ ! ಪ್ರತಿದಿನಂ ಮಮ ರಕ್ಷ ದೇವಿ ! ॥೬॥

ಅರ್ಧೇಂದುಮಂಡಿತಜಟಾಲಲಿತಸ್ವರೂಪೇ ।
ಶಾಸ್ತ್ರಪ್ರಕಾಶಿನಿ ! ಸಮಸ್ತ ಕಲಾಧಿನಾಥೇ ॥
ಚಿನ್ಮುದ್ರಿಕಾಜಪಸರಾಭಯಪುಸ್ತಕಾಂಕೇ ।
ವಾಗೀಶ್ವರಿ ! ಪ್ರತಿದಿನಂ ಮಮ ರಕ್ಷ ದೇವಿ ! ॥೭॥

ಡಿಂಡೀರಪಿಂಡಹಿಮಶಂಖಸಿತಾಭ್ರಹಾರೇ ।
ಪೂರ್ಣೇಂದುಬಿಂಬರುಚಿಶೋಭಿತದಿವ್ಯಗಾತ್ರೇ ॥
ಚಾಂಚಲ್ಯಮಾನಮೃಗಶಾಬಲಲಾಟನೇತ್ರೇ ।
ವಾಗೀಶ್ವರಿ ! ಪ್ರತಿದಿನಂ ಮಮ ರಕ್ಷ ದೇವಿ ! ॥೮॥

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ ।
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥೯॥

---

## ಶ್ರೀ ಸರಸ್ವತೀದೇವೀಶತಾಷ್ಟನಾಮಸ್ತೋತ್ರಂ

---

ಅರ್ಹದ್ವಕ್ತ್ರಾಬ್ಜಸಂಭೂತಾಂ ಗಣಾಧೀಶಾವತಾರಿತಾಂ ।
ಮಹರ್ಷಿಧಾರಿತಾಂ ಸ್ತೋಷ್ಯೇ ನಾಮ್ನಾಮಷ್ಟಶತೇನ ಗಾಂ ॥

೧. ಓಂ ಹ್ರೀಂ ಶ್ರ್ಯಾದಿಬ್ರಹ್ಮಮುಖಾಂಭೋಜಪ್ರಭವಾಯೈ ನಮಃ
೨. ಓಂ ಹ್ರೀಂ ದ್ವಾದಶಾಂಗಿನ್ಯೈ ನಮಃ
೩. ಓಂ ಹ್ರೀಂ ಸರ್ವಭಾಷಾಮಯ್ಯೈ ನಮಃ
೪. ಓಂ ಹ್ರೀಂ ವಾಣ್ಯೈ ನಮಃ
೫. ಓಂ ಹ್ರೀಂ ಶಾರದಾಯೈ ನಮಃ
೬. ಓಂ ಹ್ರೀಂ ಗಿರೇ ನಮಃ
೭. ಓಂ ಹ್ರೀಂ ಸರಸ್ವತ್ಯೈ ನಮಃ
೮. ಓಂ ಹ್ರೀಂ ಬ್ರಾಹ್ಮ್ಯೈ ನಮಃ
೯. ಓಂ ಹ್ರೀಂ ವಾಗ್ದೇವತಾಯೈ ನಮಃ
೧೦. ಓಂ ಹ್ರೀಂ ದೇವ್ಯೈ ನಮಃ
೧೧. ಓಂ ಹ್ರೀಂ ಭಾರತ್ಯೈ ನಮಃ



೧೨. ಓಂ ಹ್ರೀಂ ಶ್ರೀನಿವಾಸಿನ್ಯೈ ನಮಃ
೧೩. ಓಂ ಹ್ರೀಂ ಆಚಾರಸೂತ್ರಕೃತ್ಪಾದಾಯೈ ನಮಃ
೧೪. ಓಂ ಹ್ರೀಂ ಸ್ಥಾನತುರ್ಯಾಂಗಜಂಘಾಯೈ ನಮಃ
೧೫. ಓಂ ಹ್ರೀಂ ವ್ಯಾಖ್ಯಾಪ್ರಜ್ಞಪ್ತಿಜ್ಞಾತೃಧರ್ಮಕಥಾಂಗಚಾರೂರು
ಭಾಸುರಾಯೈ ನಮಃ
೧೬. ಓಂ ಹ್ರೀಂ ಉಪಾಸಕಾಂಗಸನ್ಮಧ್ಯಾಯೈ ನಮಃ
೧೭. ಓಂ ಹ್ರೀಂ ಅಂತಕೃದ್ದಶಾಂಗನಾಭಿಕಾಯೈ ನಮಃ
೧೮. ಓಂ ಹ್ರೀಂ ಅನುತ್ತರೋತ್ಪತ್ತಿದಶಪ್ರಶ್ನವ್ಯಾಕರಣಸ್ತನ್ಯೈ ನಮಃ
೧೯. ಓಂ ಹ್ರೀಂ ವಿಪಾಕಸೂತ್ರಸದ್ವಕ್ಷಸೇ ನಮಃ
೨೦. ಓಂ ಹ್ರೀಂ ದೃಷ್ಟಿವಾದಾಂಗಕಂಧರಾಯೈ ನಮಃ
೨೧. ಓಂ ಹ್ರೀಂ ಪರಿಕರ್ಮಮಹಾಸೂತ್ರವಿಪುಲಾಂಸವಿರಾಜಿತಾಯೈ ನಮಃ
೨೨. ಓಂ ಹ್ರೀಂ ಚಂದ್ರಮಾರ್ತಂಡಪ್ರಜ್ಞಪ್ತಿಭಾಸ್ವದ್ಬಾಹುಸುವಲ್ಲ್ಯೈ
ನಮಃ
೨೩. ಓಂ ಹ್ರೀಂ ಜಂಬೂದ್ವೀಪಸಾಗರಪ್ರಜ್ಞಪ್ತಿಸತ್ಕರಾಯೈ ನಮಃ
೨೪. ಓಂ ಹ್ರೀಂ ವ್ಯಾಖ್ಯಾಪ್ರಜ್ಞಪ್ತಿವಿಭ್ರಾಜತ್ಪಂಚಶಾಖಾಮನೋಹ
ರಾಯೈ ನಮಃ
೨೫. ಓಂ ಹ್ರೀಂ ಪೂರ್ವಾನುಯೋಗವದನಾಯೈ ನಮಃ
೨೬. ಓಂ ಹ್ರೀಂ ಪೂರ್ವಾಖ್ಯಚಿಬುಕಾಂಚಿತಾಯೈ ನಮಃ
೨೭. ಓಂ ಹ್ರೀಂ ಉತ್ಪಾದಪೂರ್ವಸನ್ನಾಸಾಯೈ ನಮಃ
೨೮. ಓಂ ಹ್ರೀಂ ಆಗ್ರಾಯಣೀಯದಂತಾಯೈ ನಮಃ
೨೯. ಓಂ ಹ್ರೀಂ ಅಸ್ತಿನಾಸ್ತಿಪ್ರವಾದೋಷ್ಠ್ಯಾಯೈ ನಮಃ
೩೦. ಓಂ ಹ್ರೀಂ ಚಿತ್ಪ್ರವಾದಕಪೋಲಾಯೈ ನಮಃ
೩೧. ಓಂ ಹ್ರೀಂ ಸತ್ಯಪ್ರವಾದರಸನಾಯೈ ನಮಃ
೩೨. ಓಂ ಹ್ರೀಂ ಆತ್ಮಪ್ರವಾದಮಹಾಹನವೇ ನಮಃ
೩೩. ಓಂ ಹ್ರೀಂ ಕರ್ಮಪ್ರವಾದಸತ್ತಾಲವೇ ನಮಃ
೩೪. ಓಂ ಹ್ರೀಂ ಪ್ರತ್ಯಾಖ್ಯಾನಲಲಾಟಕಾಯೈ ನಮಃ

೩೫. ಓಂ ಹ್ರೀಂ ವಿದ್ಯಾನುವಾದಕಲ್ಯಾಣನಾಮಧೇಯಸುಲೋಚನಾಯೈ ನಮಃ

೩೬. ಓಂ ಹ್ರೀಂ ಪ್ರಾಣಾವಾಯಕ್ರಿಯಾವಿಶಾಲಪೂರ್ವಭ್ರೂಧನುರ್ಲತಾಯೈ ನಮಃ

೩೭. ಓಂ ಹ್ರೀಂ ಲೋಕಬಿಂದುಮಹಾಸಾರಚೂಲಿಕಾಶ್ರವಣದ್ವಯಾಯೈ ನಮಃ

೩೮. ಓಂ ಹ್ರೀಂ ಸ್ಥಲಗಾಖ್ಯಲಸಚ್ಛ್ರೀವಾರ್ಯೈ ನಮಃ
೩೯. ಓಂ ಹ್ರೀಂ ಜಲಗಾಖ್ಯಮಹಾಕಟಾಯೈ ನಮಃ
೪೦. ಓಂ ಹ್ರೀಂ ಮಾಯಾಗತಸುಲಾವಣ್ಯಾಯೈ ನಮಃ
೪೧. ಓಂ ಹ್ರೀಂ ರೂಪಗಾಖ್ಯಸುರೂಪಿಣ್ಯೈ ನಮಃ
೪೨. ಓಂ ಹ್ರೀಂ ಆಕಾಶಗತಸೌಂದರ್ಯಾಯೈ ನಮಃ
೪೩. ಓಂ ಹ್ರೀಂ ಶ್ರೀಕಲಾಪಿಸುವಾಹನಾಯೈ ನಮಃ
೪೪. ಓಂ ಹ್ರೀಂ ನಿಶ್ಚಯವ್ಯವಹಾರದ್ವಿಬ್ಜ್ನೂಪುರಾಯೈ ನಮಃ
೪೫. ಓಂ ಹ್ರೀಂ ಬೋಧಮೇಖಲಾಯೈ ನಮಃ
೪೬. ಓಂ ಹ್ರೀಂ ಸಮ್ಯಕ್ಚಾರಿತ್ರಶೀಲಹಾರಾಯೈ ನಮಃ
೪೭. ಓಂ ಹ್ರೀಂ ಮಹೋಜ್ಜ್ವಲಾಯೈ ನಮಃ
೪೮. ಓಂ ಹ್ರೀಂ ನೈಗಮಹಾಮೇಘಕೇಯೂರಾಯೈ ನಮಃ
೪೯. ಓಂ ಹ್ರೀಂ ಸಂಗ್ರಹಾನಘಚೋಲಕಾಯೈ ನಮಃ
೫೦. ಓಂ ಹ್ರೀಂ ವ್ಯವಹಾರೋದ್ಧ್ವಕಟಕಾಯೈ ನಮಃ
೫೧. ಓಂ ಹ್ರೀಂ ಋಜುಸೂತ್ರಸುಕಂಕಣಾಯೈ ನಮಃ
೫೨. ಓಂ ಹ್ರೀಂ ಶಬ್ದೋಜ್ಜ್ವಲಮಹಾಪಾಶಾಯೈ ನಮಃ
೫೩. ಓಂ ಹ್ರೀಂ ಸಮಭಿರೂಢಮಹಾಂಕುಶಾಯೈ ನಮಃ
೫೪. ಓಂ ಹ್ರೀಂ ಏವಂಭೂತಸನ್ಮುದ್ರಾಯೈ ನಮಃ
೫೫. ಓಂ ಹ್ರೀಂ ದಶಧರ್ಮಮಹಾಂಬರಾಯೈ ನಮಃ
೫೬. ಓಂ ಹ್ರೀಂ ಜಪಮಾಲಾಲಸದ್ಧಸ್ತಾಯೈ ನಮಃ
೫೭. ಓಂ ಹ್ರೀಂ ಪುಸ್ತಕಾಂಕಿತಸತ್ಕರಾಯೈ ನಮಃ
೫೮. ಓಂ ಹ್ರೀಂ ನಯಪ್ರಮಾಣತಾಟಂಕಾಯೈ ನಮಃ



೫೯. ಓಂ ಹ್ರೀಂ ಪ್ರಮಾಣದ್ವಯಕರ್ಣಿಕಾಯೈ ನಮಃ
೬೦. ಓಂ ಹ್ರೀಂ ಕೇವಲಜ್ಞಾನಮುಕುಟಾಯೈ ನಮಃ
೬೧. ಓಂ ಹ್ರೀಂ ಶುಕ್ಲಧ್ಯಾನವಿಶೇಷಕಾಯೈ ನಮಃ
೬೨. ಓಂ ಹ್ರೀಂ ಸ್ಯಾತ್ಕಾರಪ್ರಾಣಜೀವಂತ್ಯೈ ನಮಃ
೬೩. ಓಂ ಹ್ರೀಂ ಚಿದುಪಾದೇಯಭಾಷಿಣ್ಯೈ ನಮಃ
೬೪. ಓಂ ಹ್ರೀಂ ಅನೇಕಾಂತಾತ್ಮಕಾನಂದಪದ್ಮಾಸನನಿವಾಸಿನ್ಯೈ ನಮಃ
೬೫. ಓಂ ಹ್ರೀಂ ಸಪ್ತಭಂಗೀಸಿತಚ್ಛತ್ರಾಯೈ ನಮಃ
೬೬. ಓಂ ಹ್ರೀಂ ನಯಷಟ್ಕಪ್ರದೀಪಿಕಾಯೈ ನಮಃ
೬೭. ಓಂ ಹ್ರೀಂ ದ್ರವ್ಯಾರ್ಥಿಕನಯಾನೂನಪರ್ಯಾಯಾರ್ಥಿಕಚಾಮರಾಯೈ ನಮಃ

೬೮. ಓಂ ಹ್ರೀಂ ಕೈವಲ್ಯಕಾಮಿನ್ಯೈ ನಮಃ
೬೯. ಓಂ ಹ್ರೀಂ ಜ್ಯೋತಿರ್ಮಯ್ಯೈ ನಮಃ
೭೦. ಓಂ ಹ್ರೀಂ ವಾಙ್ಮಯರೂಪಿಣ್ಯೈ ನಮಃ
೭೧. ಓಂ ಹ್ರೀಂ ಪೂರ್ವಾಪರಾವಿರುದ್ಧಾಯೈ ನಮಃ
೭೨. ಓಂ ಹ್ರೀಂ ಗವೇ ನಮಃ
೭೩. ಓಂ ಹ್ರೀಂ ಶ್ರುತ್ಯೈ ನಮಃ
೭೪. ಓಂ ಹ್ರೀಂ ವೇದಾಧಿದೇವತಾಯೈ ನಮಃ
೭೫. ಓಂ ಹ್ರೀಂ ತ್ರಿಲೋಕಮಂಗಲಾಯೈ ನಮಃ
೭೬. ಓಂ ಹ್ರೀಂ ಭವ್ಯಶರಣ್ಯಾಯೈ ನಮಃ
೭೭. ಓಂ ಹ್ರೀಂ ಸರ್ವವಂದಿತಾಯೈ ನಮಃ
೭೮. ಓಂ ಹ್ರೀಂ ಬೋಧಮೂರ್ತಯೇ ನಮಃ
೭೯. ಓಂ ಹ್ರೀಂ ಶಬ್ದಮೂರ್ತಯೇ ನಮಃ
೮೦. ಓಂ ಹ್ರೀಂ ಚಿದಾನಂದೈಕರೂಪಿಣ್ಯೈ ನಮಃ
೮೧. ಓಂ ಹ್ರೀಂ ಶಾರದಾಯೈ ನಮಃ
೮೨. ಓಂ ಹ್ರೀಂ ವರದಾಯೈ ನಮಃ
೮೩. ಓಂ ಹ್ರೀಂ ನಿತ್ಯಾಯೈ ನಮಃ
೮೪. ಓಂ ಹ್ರೀಂ ಭುಕ್ತಿಮುಕ್ತಿಫಲಪ್ರದಾಯೈ ನಮಃ